# ಜನಮತವೇ ಗೆಲುವಿನ ದಾರಿ

**ಪರಮೇಶ್ವರ್ ಗುಂಡ್ಕಲ್**

ಕಲರ್ಸ್ ಕನ್ನಡದ 'ಬಿಗ್‌ಬಾಸ್' ನಿರ್ದೇಶಕ

★ *ವೃತ್ತಿ ಪಲ್ಲಟದ ಬಗ್ಗೆ ಹೇಳುವುದಾದರೆ..*

ಒತ್ತಡ ಜಾಸ್ತಿ ಅನುಭವಿಸುತ್ತಿದ್ದೇನೆ. 'ಬಿಗ್‌ಬಾಸ್' ಆರಂಭವಾದಾಗಿನಿಂದ ವಾರದ ರಜೆ ಕೂಡ ತೆಗೆದುಕೊಂಡಿಲ್ಲ. ನನ್ನಲ್ಲಿ ಒಬ್ಬ ಕಥೆ ಸೃಷ್ಟಿಶೀಲನಿದ್ದ. ಕಥೆ ಹೇಳುವುದು ಆಸಕ್ತಿಯ ಸಂಗತಿಯಾಗಿತ್ತು. ಅದಕ್ಕೊಂದು ವೇದಿಕೆ ಇಲ್ಲಿ ಸಿಕ್ಕಿದೆ. ಕ್ಷಣ ಕ್ಷಣವೂ ಭಯಂಕರ ಸವಾಲನ್ನು ಎದುರಿಸಬೇಕು. ಮೊದಲಿನ ದಿನಗಳನ್ನು ಹೋಲಿಸಲು ಸಾಧ್ಯವಿಲ್ಲ. ನಿತ್ಯ 300ಜನ 'ಬಿಗ್‌ಬಾಸ್' ಹಿಂದೆ ಕೆಲಸ ಮಾಡುತ್ತಾರೆ. ಎಲ್ಲರೂ 24ಗಂಟೆ ಶ್ರಮಿಸಿ ಒಂದು ಗಂಟೆ ಕಾರ್ಯಕ್ರಮ ರೂಪಿಸುತ್ತೇವೆ.

★ *ಮೊದಲ ಸ್ಪರ್ಧೆಯ ಜನಪ್ರಿಯತೆಗೆ ಹೋಲಿಸಿದರೆ ಈ ಬಾರಿ ಕಡಿಮೆ ಅನ್ನಿಸುತ್ತೆ ಅಲ್ವಾ?*

ಮನಸ್ಸಿನ ಗ್ರಹಣ ಶಕ್ತಿ ಅಂತಹದ್ದು, ನಮ್ಮ ಮೊದಲಗಳು ಸ್ಥಿರಗೊಂಡಿರುತ್ತವೆ. ಅದಕ್ಕೇ ನಮ್ಮ ಮೊದಲ ಪ್ರೀತಿ, ಮೊದಲ ಸಿನಿಮಾ ನೋಡಿದ್ದು, ಮೊದಲ ಕವಿತೆ ಬರೆದಿದ್ದು, ಓದಿದ್ದು... ನೆನಪಿದ್ದಷ್ಟು ನಂತರದ್ದು ಇರುವುದಿಲ್ಲ. ಇಲ್ಲಿಯೂ ಅದೇ ಮೊದಲ ಬಾರಿಗೆ ಕನ್ನಡದಲ್ಲಿ 'ಬಿಗ್‌ಬಾಸ್' ಪರಿಚಯ ಆಯಿತು. ಅದು ಈಗಲೂ ಜನರನ್ನೂ ಕಾಡುವುದು ಸಹಜ. ಟಿಆರ್‌ಪಿ ಮಾನದಂಡದ ಮೇಲೆ ಹೇಳುವುದಾರೆ ವೀಕ್ಷಕರ ಪ್ರಮಾಣ ಹೆಚ್ಚಿದೆ. ಅದು ಅದರ ಜನಪ್ರಿಯತೆಯ ಪ್ರತೀಕ.

★ *ಸಂಕಲನವನ್ನು ಹೇಗೆ ಮಾಡುತ್ತೀರಿ?*

ಏಕಾಂತದ ನಡವಳಿಕೆ, ಸಮೂಹದ ನಡವಳಿಕೆಗಳು ಭಿನ್ನ. ಅರಿವಿಲ್ಲದಂತೆ ತಪ್ಪುಗಳು ಘಟಿಸಿರುತ್ತವೆ. ಕೆಲವೊಮ್ಮೆ ಅಶ್ಲೀಲ, ಅಸಹ್ಯ ಎನ್ನಬಹುದಾದ ಸಂಗತಿಗಳು ಬರುತ್ತವೆ. ಮೊದಲು ಎಚ್ಚರಿಕೆಯನ್ನು ಇಟ್ಟುಕೊಂಡು ಕುತೂಹಲ, ಸ್ವಾರಸ್ಯಕರ ಸಂಗತಿಗಳನ್ನು ಉಳಿಯುವಂತೆ ಸಂಕಲಿಸುತ್ತೇವೆ. ಇದೊಂದು ತಂಡ ಮಾಡುವ ಕೆಲಸ. ಅದೆಲ್ಲದರ ನಿರ್ವಹಣೆಯನ್ನು ಸಹನಿರ್ದೇಶಕ ಜಯದೇವ್ ಕಪ್ಪಣ್ಣ ಮಾಡುತ್ತಾರೆ. ಚಿಕ್ಕ ಚಿಕ್ಕ ಸಂಗತಿಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ ನಂತರವೇ ಅದನ್ನು ಬಿತ್ತರಿಸುತ್ತೇವೆ.

★ *ಸ್ಪರ್ಧಾಳುಗಳ ಆಯ್ಕೆ ಹೇಗಿರುತ್ತದೆ?*

ಸಮಾಜದ ವಿವಿಧ ಸ್ಥರದಲ್ಲಿ ಪರಿಚಯಗೊಂಡವರನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಹೆಣ್ಣು ಗಂಡು ಭೇದವಿಲ್ಲದೆ ಬೇರೆ ಬೇರೆ ವಯಸ್ಸಿನ, ಬೇರೆ ಬೇರೆ ವೃತ್ತಿಯವರನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಅದು ಏಕತಾನತೆಯನ್ನು ಒಡೆದು ಹಾಕುತ್ತದೆ. ವೈವಿಧ್ಯತೆಯನ್ನು ಬಿಂಬಿಸುವ ಜೊತೆಗೆ ಒಬ್ಬೊಬ್ಬರ ಕೌಶಲ್ಯ, ತಿಳಿವಳಿಕೆ ಅನಾವರಣವಗುತ್ತದೆ. ಇದು ಜನರಿಗೆ ಇಷ್ಟ ಆಗುತ್ತದೆ.

★ *ಫಲಿತಾಂಶದ ಬಗ್ಗೆ ಅಪಸ್ವರ ಇದೆಯಲ್ಲ?*

ಪ್ರತಿಯೊಬ್ಬರೂ ತಮ್ಮದೇ ಆದ ತರ್ಕದಿಂದ ಸ್ಪರ್ಧಿಗಳನ್ನು ಗುರುತಿಸಿಕೊಳ್ಳುತ್ತಾರೆ. ಅದು ಹುಸಿಯಾದಾಗ ದೂರುವುದು ಸಹಜ. ಇಲ್ಲಿ ಚಾನೆಲ್ ಯಾವ ರೀತಿಯಲ್ಲಿಯೂ ಪ್ರವೇಶಿಸುವುದಿಲ್ಲ. ಸಂಪೂರ್ಣ ವೀಕ್ಷಕರ ಆಯ್ಕೆಯ ಮೇಲೆ ನಡೆದಿರುತ್ತದೆ. ಜನರ ಆಯ್ಕೆಯನ್ನು ಪಾರದರ್ಶಕವಾಗಿ ಪ್ರಕಟಿಸುವುದಷ್ಟೇ ನಮ್ಮ ಕೆಲಸ. ಈ ವರ್ಷ ಅದನ್ನು ವೀಕ್ಷಕರ ಮುಂದೆ ಇಡುವ ಬಗ್ಗೆ ಯೋಚಿಸುತ್ತೇವೆ. ತೀವ್ರ ಪೈಪೋಟಿಯಂತೂ ಇದ್ದೇ ಇದೆ. ಜನಮನ್ನಣೆಯೇ ಗೆಲುವಿನ ದಾರಿ.

★ *ಹೊಡೆದಾಟ, ಜಗಳ, ಚಾಡಿ ದೂರು ಪ್ರತಿ ದೂರಿನಲ್ಲಿಯೇ ಸಾಗುತ್ತಿದೆ?*

ಅಭಿಪ್ರಾಯ ಭಿನ್ನತೆಗೆ ತಾಕಲಾಟ ಇದ್ದೇ ಇರುತ್ತೆ. ಸಮಾಜದಲ್ಲಿ ಸ್ಪರ್ಧಿಗಳ ಬಗ್ಗೆ ಇರುವ ಒಲವು– ನಿಲುವುಗಳು ಏನು ಅನ್ನುವುದು ಗೊತ್ತಿಲ್ಲ. ಹಾಗೆಯೇ ನಡೆಯುತ್ತಿದೆ. ಹೊಡೆದಾಟ ಮುಗಿದ ಅಧ್ಯಾಯ. ಅದಕ್ಕೆ ಕ್ಷಮೆಯನ್ನು ತಕ್ಷಣ ಸಂಬಂಧಪಟ್ಟವರು ಕೋರಿದ್ದಾರೆ. ಸೋತವರಿಗೂ ಒಂದು ಅವಕಾಶ ಇರಲಿ ಎಂದು ವೆಂಕಟ್ ಕರೆಸಲಾಗಿತ್ತು. ಅವರು ಮಾತು ತಪ್ಪಿ, ಪಶ್ಚಾತಾಪವನ್ನೂ ಪಟ್ಟಿದ್ದಾರೆ.

■ ರಾಗು



ಚಿತ್ರ: ಶೋಟೋಕಾರ್